REVIEWS OF LITERATURE
ISSN: 2347-2723
IMPACT FACTOR : 3.3754(UIF)
VOLUME - 5 | ISSUE - 5 | DECEMBER - 2017


# ಡಾ. ಡಿ.ವಿ. ಹಳ್ಳಿಗುಡಿಯವರ 'ಅನುಬಂಧದ ಸಂಬಂಧ' ಕೃತಿಯ ವಿಮರ್ಶೆ

**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**

ಡಾ. ಹಳ್ಳಿಗುಡಿಯುವರು ವೃತ್ತಿಯಲ್ಲಿ ವೈದ್ಯರಾದರು ಪ್ರವೃತಿಯಲ್ಲಿ, ಸಾಹಿತಿ ಆದರೆ ಕಾಟಚಾರಕ್ಕೆ ಬರೆದ ಕೃತಿಯಲ್ಲ. ತಮ್ಮ ಅನುಭವದ ಆಳದಿಂದ ಬರೆದ ಕೃತಿ, ಮಾನವೀಯ ಸಂಬಂಧದ ನೆಲೆ. ಜಾಗತೀಕರಣದ ಸಂದರ್ಭದಲ್ಲಿ ಮಾನವೀಯ ಮನಸ್ಸುಗಳು ಶಿಥಿಲಗೊಳ್ಳುತ್ತಿವೆ. ಕೇವಲ ಹಣಕ್ಕಾಗಿಯೇ ದರೋಡೆ ವಂಚನೆ, ಮೋಸ, ನಂಬಿಕೆ ದ್ರೋಹಗಳು ನಡೆಯುತ್ತಿವೆ. ಮಾನವೀಯ ಸಂಬಂಧಕ್ಕೆ ಬೆಲೆಯೇ ಇಲ್ಲ. ಕಳ್ಳತನ ಅತ್ಯಾಚಾರಗಳಂಥಹ ಭೂತಗಳು ಇಂದಿನ ಸಮಾಜವನ್ನು ಆಳುತ್ತಿವೆ. ಪ್ರೀತಿ, ವಿಶ್ವಾಸ, ನಂಬಿಕೆ, ರೀತಿ ನೀತಿಗಳು ಈ ಸಮಾಜದಲ್ಲಿ ಕಾಣದಾಗಿದೆ. ಹಣಕ್ಕಾಗಿ, ಆಸ್ತಿಗಾಗಿ ಒಡಹುಟ್ಟಿದವರೆ ವೈರಿಗಳಾಗುತ್ತಿದ್ದಾರೆ. ಅವಿಭಕ್ತಕುಟುಂಬಗಳು ಮಾಯವಾಗಿ ವಿಭಕ್ತಕುಟುಂಬಗಳು ಹೆಚ್ಚುತ್ತಿವೆ. ಅವು ಕೇಲವೆ ದಿನಗಳಲ್ಲಿ ನೆಲೆಕಚ್ಚಿ ವಿಚ್ಛೇದನ ರೂಪಪಡೆದು ಕೊಂಡು ಮುಕ್ತಿಹೊಂದುತ್ತಿವೆ. ವರದಕ್ಷಿಣೆ, ಪಿಡುಗು ಹರಡಿಕೊಂಡು ಸಮಾಜವನ್ನು ರೋಗಗ್ರಸ್ತ ಮಾಡಿಬಿಟ್ಟಿದೆ. ಆದರೆ ಹಳ್ಳಿಗುಡಿಯವರ ಕಾದಂಬರಿ ಗಾತ್ರದಲ್ಲಿ ಚಿಕ್ಕದಾದರು, ಈ ಎಲ್ಲಾ ಗುಣಗಳನ್ನು ಮೆಟ್ಟಿನಿಂತಿದೆ. ಮಾನವಪರ ಪ್ರೀತಿ, ವಿಶ್ವಾಸ, ನಂಬಿಕೆಗೆ, ಸಾಕ್ಷಿಯಾಗಿದೆ. ಕಾದಂಬರಿ ಕಾಟಾಚಾರಕ್ಕೆ ಓದುವಂತಹದಲ್ಲ ತಾನಾಗಿಯೇ ಓದಿಸಿಕೊಂಡು ಹೋಗುವ ಅತ್ಯುತ್ತಮ ಪುಟ್ಟ ಕಾದಂಬರಿ.

ಕಥೆ ಚಿಕ್ಕದಾದರು, ವಸ್ತು ದೊಡ್ಡದು ಮಾನವೀಯ ನೆಲೆಯಾಗಿ, ಮಾನವೀಯ ಸೆಲೆಯಾಗಿ, ಮನುಷ್ಯನ ನಾಡಿ ಮಿಡಿತವನ್ನು ನಿಲ್ಲಿಸುವ, ಚಕಿತಗೊಳಿಸುವ ಘಟನೆಗಳಿವೆ. ಕಥೆ ಎರಡು ಕುಟುಂಬಗಳೀಗೆ ಸಂಬಂಧ ಪಟ್ಟಿದು. ಆ ಕುಟುಂಬಗಳಲ್ಲಿರುವ ಪ್ರೀತಿ, ವಿಶ್ವಾಸ ಸಮಾಜಕ್ಕೆ ಮಾದರಿಯಾಗಿ ನಿಲ್ಲಬಲ್ಲವುಗಳು. ಬಸವರಾಜಪ್ಪ, ಚಂದ್ರಶಖರಯ್ಯ ಈ ಎರಡು ಕುಟುಂಬಗಳ ಯಜಮಾನರು. ಬಸವರಾಜಪ್ಪ ಮಗಳು ಸುಕನ್ಯಾಳಿಗೆ, ಚಂದ್ರಶೇಖರಯ್ಯನವರ ಮಗ ರವಿಗೆಕೊಟ್ಟು ಮದುವೆ ಮಾಡುತ್ತಾರೆ. ಅಲ್ಲಿಂದ ಕಥೆ ಒಂದು ಹೊಸ ತಿರುವನ್ನು ತಂದು ಕೊಡುತ್ತದೆ. ಎರಡು ಜಿಲ್ಲೆಗಳ ಪರಸ್ಪರ ಸಂಬಂಧ ಮತ್ತು ಸಂಪ್ರದಾಯಗಳ ಮಿಲನದ ಸಂಕೇತವೇ ಈ ಕಾದಂಬರಿಯಾಗಿ.

ಬಸವರಾಜಪ್ಪನ ತನ್ನ ಹಿರಿಯ ಮಗನಿಗೆ ಮದುವೆ ಮಾಡುತ್ತಾರೆ. ಆದರೆ ಕೇವಲ ಹದಿನೈದು ದಿನ ಮಾತ್ರ ಇದ್ದ. ಈತ ತನ್ನ ಹೆಂಡತಿಯ ಜೊತೆ ಅಮೇರಿಕಾಕ್ಕೆ ಹಾರಿ ಹೋಗುತ್ತಾನೆ. ತನ್ನ ಮಗಳು ಸುಕನ್ಯಾಳಿಗೆ ಮದುವೆ ಮಾಡಬೇಕು ಎನ್ನುವ ಚಿಂತೆ ಇರುತ್ತದೆ. ಆದರೆ ಬಸವರಾಜಪ್ಪನವರು ತುಂಬಾ ಶ್ರಮಜಿವಿಗಳು ತಾವು ಒಬ್ಬರೆ ತೋಟ, ಗದ್ದೆ, ಪೆಟ್ರೋಲ ಬಂಕ್, ಇವೆಲ್ಲವೂಗಳನ್ನು ನೋಡಿಕೊಳ್ಳುತ್ತಿದ್ದರು. ಇವರು ಪ್ರಮಾಣಿಕ ಎನ್ನುವುದಕ್ಕೆ ಇವರ ಒಂದುಮಾತು ಸಾಕ್ಷಿ "ಬಸವರಾಜಪ್ಪನವರು ವ್ಯವಹಾರ ಚತುರರು, ಅಷ್ಟೇ ಪ್ರಾಮಾಣಿಕರು ಮನುಷ್ಯ 'ನಮ್ಮ ಪೆಟ್ರೋಲ ಬಂಕಿನ ಪೆಟ್ರೋಲನಲ್ಲಿ ಮಿಲಾವಟ್ ಅಥವಾ ಅಳತೆಯಲ್ಲಿ



ಕಮ್ಮಿ ಇದೆ ಎಂದು ತೋರಿಸಿ ಕೊಟ್ಟವರಿಗೆ, ಎರಡು ಸಾವಿರ ರೂಪಾಯಿ ನಗದು ಬಹುಮಾನ ಹಣವನ್ನು ಕೊಡಲಾಗುತ್ತದೆ'. ಎಂದು ತಮ್ಮ ಪೆಟ್ರೋಲ್ ಬಂಕಿನ ಮುಂದೆ ದೊಡ್ಡದೊಂದು ಬೋರ್ಡು ಹಾಕಿಸಿದ್ದರು. ಅದರಿಂದ ಅಕ್ಕಪಕ್ಕದ ಊರಿನವರ ಟ್ರಾಕ್ಟರ್, ಸ್ಕೂಟರ್, ಮೋಟರ ಸೈಕಲ್ ನಂಬುಗೆಯಿಂದ ಪೆಟ್ರೋಲ ತುಂಬಿಸಿಕೊಂಡು, ಪೆಟ್ರೋಲ ಬಂಕಿನ ಹಿಂದುಗಡೆ ಇರುವ ಹಾಲಿನಲ್ಲಿ ವಿಶ್ರಾಂತಿಮಾಡಿ ಹೊರಡುತ್ತಿದ್ದರು, ದೂರದ ಪ್ರಯಾಣಿಕರೆ ಇದರೊಂದಿಗೆ ಸ್ನಾನದ ವ್ಯವಸ್ಥೆಯೂ ಸಹ ಕಲ್ಪಿಸಿಕೊಟ್ಟಿದರು, ಪಕ್ಕದ ಹೋಟೆಲನಲ್ಲಿ ಊಟದ ವ್ಯವಸ್ಥೆ"[1] ಇರುವುದರಿಂದ ವ್ಯವಹಾರ ಬೆಳೆಯಿತು. ಹೀಗೆ ಪ್ರಮಾಣಿಕರಾದ ಬಸವರಾಜಪ್ಪನವರ ವ್ಯಾಪಾರ ಬೆಳೆದು ಅತ್ಯಂತ ಶ್ರಿಮಂತರಾದರು. ಅವರ ಶ್ರೀಮಂತಿಕೆಗೆ ಅವರ ಪ್ರಮಾಣಿಕತೆಯೆ ಕಾರಣ.

ಹೀಗೆ ಒಂದು ದಿನ ತಮ್ಮ ಮಗಳ ಮದುವೆಯ ಚಿಂತೆಯಲ್ಲಿರುವಾಗ ಚಿಕ್ಕಮಗಳೂರಿನಿಂದ ಶಂಕ್ರೆಪ್ಪ ಬರುತ್ತಾನೆ. ಆತನ ಮುಂದೆ ತಮ್ಮ ದುಗುಡುವನ್ನು ಹೇಳುತ್ತಾರೆ "ಶಂಕ್ರಪ್ಪನಿಗೆ ಥಟ್ಟನೆ ಚಿಕ್ಕಮಗಳೂರಿನ ಕಾಫ ಪ್ಲ್ಯಾಂಟರ್ ಚಂದ್ರಶೇಖರಯ್ಯನವರ ಮಗನ ವಿಷಯ ನೆನಪಿಗೆ ಬಂತು ಅದನ್ನು ಬಸವರಾಜಪ್ಪ ನವರ ಮುಂದೆ ಪ್ರಸ್ತಾಪಿಸಿದ ಅದನ್ನು ಮೊದಲೆ ನನಗೇಕೆ ಹೇಳಲಿಲ್ಲ ಎಂದರು ಬಸವರಾಜಪ್ಪನವರು ತಾವುದೊಡ್ಡ ಜನರು ಅದನ್ನುಹೇಗೆ ತಿಳಿಸುವುದು ಎಂದು ಸಮಯಕ್ಕಾಗಿ ಕಾಯುತ್ತಿದ್ದೆ. ಎಂದು ಶಂಕ್ರಪ್ಪ ಸಂಕೋಚದಿಂದ ಹೇಳಿದ"[೨] ಶಂಕ್ರಪ್ಪನ ನೇತೃತ್ವದಲ್ಲಿ ಕನ್ಯೆ ನೋಡುವ ಕಾರ್ಯಕ್ರಮ ಮುಗಿಸಿ, ಮದುವೆಗೆ ಸಿದ್ಧತೆ ನಡೆಸಿದರು.

ಮದುವೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಸುಕನ್ಯಾ ಮತ್ತು ಸಂಜಯ ಗಂಗೂ ಅಂಟಿಯ ಯೋಗಕ್ಷೇಮದಲ್ಲಿ ಬೆಳೆದವರು ಗಂಡನ ಮನೆಗೆ ಹೋಗುವಾಗ ಸುಕನ್ಯಾಳಿಗೆ ಎರಡು ಮಾತು ಹೇಳುತ್ತಾಳೆ. "ಗಂಗೂ ಆಂಟಿ ಮದುವರೆದು 'ನಿನ್ನ ಅತ್ತೆ ಮಾವಂದಿರ ಬಗ್ಗೆ ಯಾರ ಎದುರಿಗೂ ಒರಟಾಗಿ ಮಾತಾಡಬೇಡ ಮುಂದಿನ ಮನೆಯ ಸರೋಜಮ್ಮ ನಾಲಿಗೆ ಹಿಂದಿನ ಮನೆಯ ಜಯಮ್ಮನ ನಾಲಿಗೆ ಅವರು ಹೇಗೆ ಬದುಕುತ್ತಿದ್ದಾರೆ ಎಂಬುದು ಮುಖ್ಯವಲ್ಲ ನಾವು ನಮ್ಮ ಮನೆಯಲ್ಲಿ ಎಷ್ಟೂ ಅನ್ಯೋನ್ಯವಾಗಿ ಬದುಕುತ್ತಿದ್ದೇವೆ. ಎಂಬುದು ಅತಿ ಮುಖ್ಯ ನಾನು ನಿನ್ನಷ್ಟು ಓದಿದವಳಲ್ಲ. ಅತ್ತೆ ಮಾವಂದಿರ ಪ್ರೀತಿ ವಿಶ್ವಾಸಗಳಿಸುವುದು ಮುಖ್ಯ ಅವರನ್ನು ಕೇಳದೆ ಯಾವ ಕೆಲಸಕ್ಕೂ ಮುಂದೆ ಹೋಗಬೇಡ ನಾವಿಬ್ಬರೂ ರಕ್ತ ಸಂಬಂಧಿಗಳಿರಲಿಕ್ಕಿಲ್ಲ ಆದರೆ ಯಾವುದೊ ಸಂಬಂಧ ಬೆಳೆದುಕೊಂಡು ಬಂದಿದೆ. ಎಂದೂ ಹೇಳಿದರೂ ಸಕುನ್ಯಾ, ಗಂಗೂ ಅಂಟಿಯನ್ನು ತಬ್ಬಿಕೊಂಡುಅಳಲು ಪ್ರಾರಂಭಿಸಿದಳು. ಆಂಟಿಯ ಕಣ್ಣಲ್ಲೂ ನೀರು ತುಂಬಿತು" ಹೀಗೆ ಸುಕನ್ಯಾ ಗಂಡನ ಮನೆಗೆ ಹೋದಳು.

ಕಾದಂಬರಿ ಕೇವಲ ಎರಡು ಕುಟುಂಬಗಳ ಸಮ್ಮಿಲನವಲ್ಲ ಪ್ರೀತಿ, ಬೆಸುಗೆ, ಸಬಂಧಗಳನ್ನು ತೋರಿಸುತ್ತದೆ. ಹಂಪೆಯ ಜಾತ್ರೆಗೆ ಈ ಎರಡು ಕುಟುಂಬಗಳು ಬಂದವು, ಜಾತ್ರೆಗೆ ಬಂದ ಚಂದ್ರಶೇಖರಯ್ಯ ನವರು "ಗರ್ಭಗುಡಿಯ ಹಿಂದಿರುವ ವಿದ್ಯಾರಣ್ಯರ ಮೂರ್ತಿಯನ್ನು ನೋಡಿದರು, ಇತರ ಸ್ಥಳಗಳಿಗೆ ಹೋಗಲು ಗೈಡ ಸಹಾಯ ತೆಗೆದುಕೊಂಡರು. ಮಹತ್ವದ ಸ್ಥಳಗಳಾದ ವಿಜಯವಿಠ್ಠಲನ ಗುಡಿ, ಕಲ್ಲಿನ ರಥ ಬಡವಿಲಿಂಗ, ಕಡಲೆಕಾಳು ಗಣೇಶ, ವೀರಭದ್ರೇಶ್ವರ ಸ್ವಾಮಿ, ಆನೆ, ಕುದುರೆಗಳ ಸಾಲು, ರಾಣಿಯರ ಸ್ನಾನದ ಮನೆ, ಚಕ್ರತೀರ್ಥ, ಕೃಷ್ಣದೇವರಾಯ ನಡೆದಾಡಿ ರಾಜಬೀದಿಗಳು, ಮತ್ತಿತರ ಸ್ಥಳಗಳನ್ನು ನೋಡಿದರು. ವಿಜಯ ವಿಠ್ಠಲನ ದೇವಾಲಯದಲ್ಲಿ ಕಲ್ಲಿನ ರಥವನ್ನು ನೋಡುವಾಗ ಇದು ಕಲ್ಲಿನದೇ ಎಂದು ಅಚ್ಚರಿಗೊಂಡು ರವಿ ಮತ್ತು ಸುಕನ್ಯಾ ಕಲ್ಲಿನ ಮೇಲೆ ಕೈಯಾಡಿಸಿದಾಗ ಅವರಿಗೆ ಆ ಇತಿಹಾಸವನ್ನು, ಆ ಸುವರ್ಣ ಯುಗವನ್ನು ಬೆರಳಿನಿಂದ ಸ್ಪರ್ಶಿಸಿದಂತಾಯಿತು ಅಲ್ಲಿಂದ ಕೈಲಾಸ ವೈಕುಂಠ ನೋಡಿ ಊಟಮಾಡಿದಾಗ ೫ ಗಂಟೆಯಾಗಿತ್ತು"[೪] ಹೀಗೆ ಸಂಪೂರ್ಣ ಹಂಪಿ ಕಣ್ಣೆದುರಿಗೆ ಹಾದು ಹೋಗುವಂತೆ ವಿವರಿಸಿದ್ದಾರೆ.

ಚಂದ್ರಶೇಖರಯ್ಯ ಹಾಗು ಬಸವರಾಜಪ್ಪನವರು ಸಂತೋಷದಿಂದ ಇರುವಾಗಲೇ ಕಹಿ ಘಟನೆಯೊಂದು ನಡೆಯಿತು. ಚಿಕ್ಕಮಗಳೂರಿನಲ್ಲಿ ಶ್ರೀಮಂತರಾಗಿದ್ದ ಚಂದ್ರಶೇಖರಯ್ಯನವರನ್ನು ಕಿಡ್ನ್ಯಾಪ ಮಾಡಬೇಕೆಂದು, ನಕ್ಸಲೈಟ್‌ರು ಪ್ಲ್ಯಾನ ಮಾಡುತ್ತಾರೆ. ಇದೇ ಸಮಯದಲ್ಲಿ ಬಸವರಾಜಪ್ಪನವರು ಚಿಕ್ಕಮಗಳೂರಿನಲ್ಲಿರುತ್ತಾರೆ. ಇದನ್ನರಿತ ನಕ್ಸಲೈಟ್‌ರು ಇಬ್ಬರನ್ನು ಕದ್ದು ವಯ್ಯಲು ಸಂಚು ರೂಪಿಸುತ್ತಾರೆ. ಇದನ್ನುಕದ್ದು ಆಲಿಸಿದ ಚಂದ್ರಶೇಖರಯ್ಯನವರ ತೋಟದ ಆಳುಗಳು ತಾವು ಸಹ ಮದ್ದು, ಗುಂಡುಗಳನ್ನು ಸಂಗ್ರಹಿಸಿ ನಕ್ಸಲೈಟರು ಬರುವ ಮುಂಚೆ ಅಲ್ಲಿ ಅಲ್ಲಿ ನಿಲ್ಲುತ್ತರೆ. "ನಕ್ಸಲೈಟ್ ಅವರ ಪ್ಲ್ಯಾನಂತೆ ೪೦೦-೫೦೦ ಅಡಿದೂರದಿಂದ ಗಾಳಿಯಲ್ಲಿ ಗುಂಡು ಹಾರಿಸುತ್ತಾರೆ, ಮಾವೊ ಜಿಂದಾಬಾದ, ನಕ್ಸಲೈಟ್ ಹೋರಾಟ ಮುಂದುವರೆಯಲಿ ಎಂದು ಕೂಗುತ್ತಾ ಬರುತ್ತಿದ್ದರು. ನಾಗೇಗೌಡ, ಫರೀದ್ ನಕ್ಸಲೈಟ್‌ಗಳ ಜೀಪಿನ ಟೈರ್‌ಗಳನ್ನು ಬ್ಲಾಸ್ಟ್‌ಮಾಡಿದರು. ನಕ್ಸಲೈಟ್‌ಗಳು ಕೂಡಲೆ ಚಂದ್ರಶೇಖರಯ್ಯನವರನ್ನು ಮೇಲೆತ್ತಿಕೊಂಡು ಹೋಗಲು ಪ್ರಾರಂಭಿಸಿದರು. ಅಲ್ಲಿಯೇ ಕಾಯುತ್ತ ಕುಳಿತಿದ್ದ ನಾಗೇಗೌಡ ಅಂಥೋಣಿ ಎದ್ದವರೆ ಹೊತ್ತು ಹೊಯ್ಯುತ್ತಿದ್ದವರ ಕಾಲುಗಳ ಮೇಲೆ ದೊಣ್ಣೆಗಳಿಂದ ಬಾರಿಸ ಹತ್ತಿದರು. ಇವರ ಹೊಡೆತ ತಾಳಲಾರದೆ ಓಡಲು ಪ್ರಾರಂಭಿಸಿದರು ಗಾಳಿಯಲ್ಲಿ ಗಂಡು ಹಾರಿಸಲು ಪ್ರಾರಂಭ ಮಾಡಿದರು. ಈ ರೀತಿ ಪ್ರತೀಕಾರ ದಾಳಿ ಬರುತ್ತದೆಂದು ಅಂದುಕೊಂಡಿರದ ನಕ್ಸಲೈಟ್‌ಗಳು ಭಯಬೀತರಾಗಿ ಸಿಕ್ಕಸಿಕ್ಕ ಕಡೆ ಓಡಿಹೋಗಿ ಸಾಯಂಕಾಲದ ನಸುಗತ್ತಲಲ್ಲಿ ಮಾಯವಾದರು. ಅಂಥೋಣಿ ಪಡೆಯವರು ಕೇಕೆ ಹಾಕಿ, ಕೂಗಹತ್ತಿದರು". ಇದರಿಂದ ಚಂದ್ರಶೇಖರಯ್ಯನವರ ಆಳುಗಳನ್ನು ಹೊಗಳಿದ್ದೆ ಹೊಗಳಿದ್ದು ರೇಡಿಯೋ, ದೂರದರ್ಶನ, ಪತ್ರಿಕೆಗಳ್ಲಲಿ ಸುದ್ದಿ ಪ್ರಸಾರವಾಯಿತು.

ಈ ಘಟನೆ ನಡೆದ ಸ್ವಲ್ಪದಿನಗಳಲ್ಲಿ ಚಂದ್ರಶೇಕರಯ್ಯನವರು ತಾವು ಹೆಚ್ಚುದಿನ ಬದುಕಲಾರೆನೆಂದು ಅನಿಸಿತೊಡಗಿತ್ತು. ತಾವು ಕಾಶಿಗೆ ಹೊರೊಡುವುದಾಗಿ ಬಸವರಾಜಪ್ಪನವರನ್ನು ಕೇಳಿಕೊಂಡರು. ಆದರೆ ಬಸವರಾಜಪ್ಪನವರು ಈಗಾಗಲೇ ತಾವು ಹೋಗಿಬಂದಿರುವುದಾಗಿ ತಿಳಿಸಿದಾಗ, ಚಂದ್ರಶೇಖರಯ್ಯನವರು ತಮ್ಮ ಹೆಂಡತಿಯ ಜೊತೆ ಕಾಶಿಯಾತ್ರೆ ಮುಗಿಸಿ ಬಂದರು. ಹೀಗೆ ಒಂದುದಿನ ಹೃದಯಘಾತದಿಂದ ತೀರಿಕೊಂಡರು ನಂತರ ದಿನಗಳಲ್ಲಿ ಅವರ ಹೆಂಡತಿಯೂ ತೀರಿಕೊಂಡಳು. ಸುಕನ್ಯಾ ಹಾಗು ರವಿ, ಇಬ್ಬರೆ ಯಾಗಿ ಬಿಟ್ಟರು. ಇತ್ತಕಡೆ ಬಸವರಾಜಪ್ಪನವರು ಸಹ ತೀರಿಕೊಂಡರು. ಆದರೆ ಇವರು ಬಿತ್ತಿದ ಮಾನವೀಯತೆ, ಪ್ರೀತಿ ವಿಶ್ವಾಸ, ಸಾಯಲಿಲ್ಲ.

**ಅಡಿಟಿಪ್ಪಣಿ**

೧ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧದ ಸಂಬಂಧ ಪು – ೩

೨ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧದ ಸಂಬಂಧ ಪು – ೮

೩ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧದ ಸಂಬಂಧ ಪು – ೩೧

೪ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧದ ಸಂಬಂಧ ಪು – ೩೫

೫ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧದ ಸಂಬಂಧ ಪು – ೫೮–೫೯



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**